ಟಿಪ್ಪಣಿಗಳ ಗೊಡವೆಯೂ ಇಲ್ಲದೆ ಕೇಳುಗರಿಗೆ ಸಮ್ಮೋಹಕವಾಗುವಂತೆ ಮಾತಾಡುವುದರಲ್ಲಿ ಬೇಂದ್ರೆಯವರು ನಿಸ್ಸೀಮರಾಗಿದ್ದರು. ಹೀಗೆ ಅವರು ಧಾರವಾಡದಲ್ಲಿ ಒಂದು ಮದುವೆಗೆ ಹೋಗಿರಲಾಗಿ, ಅಲ್ಲಿ ಬೇಂದ್ರೆ ತಮ್ಮೊಡಗೂಡಿ ಮಾತನಾಡಲು ಯಾರೂ ಸಿಗಲಿಲ್ಲವೆಂದು ವಾಪಾಸು ಬರುವುದರಲ್ಲಿದ್ದರು. ಇದನ್ನರಿತ ಆಮಂತ್ರಣ ಕೊಟ್ಟಿದ್ದ ಮದುವೆಯ ಮನೆಯವರು ಬೇಂದ್ರೆಯವರ ಸುತ್ತ ನಾಲ್ಕಾರು ಜನರನ್ನು ಕೂರಿಸಿ ಮಾತನಾಡಲು ವ್ಯವಸ್ಥೆ ಮಾಡಿಕೊಟ್ಟರಂತೆ. ಬೇಂದ್ರೆಯವರು ಭಾಷಣಕ್ಕೆ ನಿಂತರೆ ಅಲ್ಲಿ ಗಂಗೆಯೇ ಇಳಿದು ಬರುತ್ತಿದ್ದಳೆಂದು ಗಿರಡ್ಡಿ ಮುಂತಾದವರು ದಾಖಲಿಸಿದ್ದಾರೆ. ಕುವೆಂಪು ಭಾಷಣಕಾರರಾಗಿ ಸೆಳೆಯಲಿಲ್ಲ. ಆದರೆ ಅವರು ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮಾಡಿದ ಭಾಷಣ ಸೇರಿದಂತೆ ಇನ್ನಿತರ ಉಪನ್ಯಾಸಗಳಲ್ಲಿ ಜನಸಮುದಾಯಗಳನ್ನು ವಿಚಾರದೀವಿಗೆಯ ಹಾದಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು ಎಂಬ ಹಕೀಕತ್ತು ಢಾಳಾಗಿಯೇ ಇರುವುದನ್ನು ಕಾಣಬಹುದು. ಕುವೆಂಪು ಅವರ ಗುರುಗಳಾಗಿದ್ದ ಬಿ.ಎಂ.ಶ್ರೀ ಅವರು ವಿದ್ಯಾವರ್ಧಕ ಸಂಘದಲ್ಲಿ ಮಾಡಿದ ಭಾಷಣ 'ಕನ್ನಡ ಮಾತು ತಲೆ ಎತ್ತುವ ಬಗೆ' ಆಧುನಿಕ ಕನ್ನಡ ಸಾಹಿತ್ಯ ನಿರ್ಮಾಣಕ್ಕೆ ದಿಕ್ಸೂಚಿಯಂತೆ ನೆರವಾಗಿ ಬಂದದ್ದನ್ನು ನಾವಿಂದು ಗುರುತಿಸಬಹುದಾಗಿದೆ. ಭಾರತದ ಧೀರೋದಾತ್ತ ಸನ್ಯಾಸಿ ವಿವೇಕಾನಂದರು 1893 ಸೆಪ್ಟೆಂಬರ್ 11ರಲ್ಲಿ ಚಿಕಾಗೊದಲ್ಲಿ ಮಾಡಿದ ಭಾಷಣ ಆಧುನಿಕ ಭಾರತದ ಧಾರ್ಮಿಕ ಜೀವನಕ್ಕೆ ಬರೆದ ಮುನ್ನುಡಿಯಂತೆಯೂ, ಹಿಂದೂ ಧರ್ಮದ ಸುಧಾರಣೆಗಾಗಿ ರೂಪಿಸಿದ ಪ್ರಣಾಳಿಕೆಯಂತೆಯೂ, ಅಂತರಂಗಶುದ್ಧಿಗಾಗಿ ತಡಕಾಡಿದ ಆತ್ಮನಿವೇದನೆಯಂತೆಯೂ ಇದೆ. ಈ ಭಾಷಣವನ್ನು ಕುವೆಂಪು ತಮ್ಮ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಉಲ್ಲೇಖಿಸುತ್ತಾರೆ. ವಿವೇಕಾನಂದರು ಚಿಕಾಗೋದಲ್ಲಿ ವೇದಾಂತ ದರ್ಶನದ ವಿಶ್ವವೈಶಾಲ್ಯತೆಯನ್ನು ಜಗತ್ತಿಗೆ ಸಾರಿ ಹೇಳುತ್ತಿರುವ ದಿನದಂದೇ ಪಾದ್ರಿ ಜೀವರತ್ನಯ್ಯ ಸಿಂಧುವಳ್ಳಿ ಚಿನ್ನಪ್ಪಗೌಡನನ್ನು ಮತಾಂತರ ಮಾಡಲು ಮುನ್ನುಡಿ ಬರೆಯುತ್ತಿದ್ದ. ಈ ಕೃತ್ಯ ನಡೆಯುವಾಗ ಶೃಂಗೇರಿ, ಧರ್ಮಸ್ಥಳ, ಉಡುಪಿಯ ಗುರುಪೀಠಗಳ ಗುರುಗಳು ಪಾದಪೂಜೆ, ಅಡ್ಡಪಲ್ಲಕ್ಕಿ ಸೇವೆ, ದಾನ, ದಕ್ಷಿಣೆ, ಸಾಷ್ಟಾಂಗ ನಮಸ್ಕಾರಗಳನ್ನು ಸ್ವೀಕರಿಸುತ್ತಿದ್ದರೆಂದು ಬರೆಯುತ್ತಾರೆ. ಅಂದಹಾಗೆ ಜೀವರತ್ನಯ್ಯ ಒಳ್ಳೆಯ ಭಾಷಣಕಾರನಾಗಿದ್ದ!

ಅನಂತಮೂರ್ತಿಯವರು ಒಳ್ಳೆಯ ಮಾತುಗಾರರಾಗಿದ್ದರು. ಬಹುಶಃ ಅವರ ವಾರಿಗೆಯವರಲ್ಲಿ ಅತಿಹೆಚ್ಚು ಭಾಷಣ ಮಾಡಿದ ವ್ಯಕ್ತಿಗಳನ್ನು ಪಟ್ಟಿ ಮಾಡಿದರೆ ಅನಂತಮೂರ್ತಿಯವರ ಹೆಸರೇ ಮುಂಚೂಣಿಯಲ್ಲಿರುತ್ತದೆ. ಕರ್ನಾಟಕದಿಂದಾಚೆಗೆ ಹೋಗಿ ಭಾಷಣ ಮಾಡಿದವರಲ್ಲಿಯೂ ಅವರು ಸ್ವಲ್ಪ ಹೆಚ್ಚೇ ತೂಗುತ್ತಾರೆ. ಅವರು ಅಧಿಕಾರ ರಾಜಕಾರಣದ ಜೊತೆ ಸಕ್ರಿಯರಾಗಿದ್ದದ್ದೂ ಇದಕ್ಕೆ ಕಾರಣವಿರಬಹುದು. ಅಕಾಡೆಮಿಕ್ಕಾಗಿ ಮಂಡಿಸಬೇಕಾದ ವಿಷಯಗಳನ್ನು ಸಾರ್ವಜನಿಕ ಭಾಷಣಕ್ಕೆ ಬಗ್ಗಿಸಿ ವಿಚಾರವನ್ನು ಸೊಗಸಾಗಿ ಮನದಟ್ಟು ಮಾಡುವ ಭಾಷಿಕ ಶಕ್ತಿ ಬರಗೂರು ರಾಮಚಂದ್ರಪ್ಪನವರ ಭಾಷಣದಲ್ಲಿ ಕಾಣುತ್ತದೆ. ಯೂಟ್ಯೂಬಿನಲ್ಲಿ ಲಂಕೇಶರು ಮಾತನಾಡಿರುವ ಕೆಲವು ಎಪಿಸೋಡ್‌ಗಳಿವೆ. ಖಾರವಾದ ವ್ಯಕ್ತಿತ್ವವನ್ನು ಹೊಂದಿದ್ದ ಲಂಕೇಶ್ ಅವರು ಅಲ್ಲಿ ಸಪ್ಪೆಯಾಗಿ ಕಾಣುತ್ತಾರೆ. ಅದೇ ಅವರ ಖಾಸ ದೋಸ್ತ್ ಡಿ.ಆರ್. ನಾಗರಾಜರ ಮಾತುಗಳು ಸ್ಫಟಿಕದಂತೆ ನಿಚ್ಚಳವಾಗಿವೆ. ಆದರೆ ಹೆಚ್ಚು ಅಕಾಡೆಮಿಕ್ಕಾಗಿವೆ.

ಕೆಲವರು ಯಾವ ಸಿದ್ಧತೆಯೂ ಇಲ್ಲದೆ ಬಂದು 'ತೌಡು ಕುಟ್ಟು'ವುದನ್ನೂ ನೋಡಿದ್ದೇನೆ. ಇಂತವರು ಕನಿಷ್ಠ ತಯಾರಿಯನ್ನೂ ಮಾಡಿಕೊಳ್ಳದೆ ತಮಗಿರುವ ಅಧಿಕಾರ ಮತ್ತು ಹುದ್ದೆಯ ಬಲವನ್ನೆ ನೆಮ್ಮಿರುವುದರ ಪರಿಣಾಮ ತೌಡಿನ ಮರೆ ಹೋಗಬೇಕಾಗುತ್ತದೆ. ಹೀಗೆ ಯಾವ ತಾಲೀಮು ಇಲ್ಲದೆ ಬಂದು ತೌಡು ಕುಟ್ಟುವವರು ಸಭಾಸದರ ಬಗ್ಗೆ ಕನಿಷ್ಠ ಗೌರವವನ್ನೂ ಇಟ್ಟುಕೊಂಡಿರುವುದಿಲ್ಲವೆನಿಸುತ್ತದೆ. ಕಾಲೇಜೊಂದರಲ್ಲಿ ಮತದಾರರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿತ್ತು. ವೇದಿಕೆಯಲ್ಲಿ ನ್ಯಾಯಾಧೀಶರು, ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು, ಪೋಲಿಸ್ ಅಧಿಕಾರಿಗಳಿದ್ದರು. ಆಗತಾನೆ ಕರ್ನಾಟಕ